ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ : ಕೇಂದ್ರ ಕಛೇರಿ : ಬೆಂಗಳೂರು-27

ಸಂ:ಕರಾಸಾ:ಕೇಕ:ಸಂ:ಪಾ:ಸಿ2:1074:[illegible]/0:2020-21 ದಿನಾಂಕ: [illegible].11.2020

## ಸುತ್ತೋಲೆ ಸಂಖ್ಯೆ: 1582/2020

(ಸಂಚಾರ (ವಾಣಿಜ್ಯ) ಇಲಾಖೆಯಿಂದ ಹೊರಡಿಸಲ್ಪಟ್ಟಿದೆ)

ವಿಷಯ: 2021ನೇ ಸಾಲಿಗೆ ವಿಕಲಚೇತನರ ರಿಯಾಯಿತಿ ದರದ ಬಸ್ ಪ್ರಯಾಣದ ಪಾಸ್ ವಿತರಿಸುವ ಬಗ್ಗೆ.

ಉಲ್ಲೇಖ: 1. ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ:779/2016, ದಿ:20.12.2016.
2. ಸಂ:ಕರಾಸಾ:ಕೇಕ:ಸಂ:ಪಾ:ಸಿ2:1187:2019-20 ದಿನಾಂಕ: 17.09.2019.
3. ಸುತ್ತೋಲೆ ಸಂಖ್ಯೆ 1564/2020, ದಿನಾಂಕ: 10.06.2020

******

ರಾಜ್ಯ ರಸ್ತೆ ಸಾರಿಗೆ ನಿಗಮಗಳು ತಮ್ಮ ಸಾಮಾಜಿಕ ಹೊಣೆಗಾರಿಕೆಯಡಿಯಲ್ಲಿ ಸರ್ಕಾರದ ನಿರ್ದೇಶನದಂತೆ ರಿಯಾಯಿತಿ ಬಸ್‌ಪಾಸ್ ಕೋರಿ ಅರ್ಜಿ ಸಲ್ಲಿಸುವ ವಿಕಲಚೇತನ ಫಲಾನುಭವಿಗಳಿಗೆ ರಿಯಾಯಿತಿ ಪಾಸ್‌ಗಳನ್ನು ವಿತರಿಸುತ್ತಿವೆ.

2021 ನೇ ಸಾಲಿಗಾಗಿ 01.01.2021 ರಿಂದ 31.12.2021 ರವರೆಗೆ ಮಾನ್ಯತೆ ಇರುವಂತೆ ವಿಕಲಚೇತನರಿಗೆ ಬಸ್ ಪಾಸ್ ವಿತರಿಸಬೇಕಿರುತ್ತದೆ. ಈ ಸಂಬಂಧ ಉಲ್ಲೇಖ-1&2 ರ ಆದೇಶಗಳನ್ನು ಅನುಸರಿಸುವುದರ ಜೊತೆಗೆ ಪ್ರಸಕ್ತ ಸಾಲಿನಲ್ಲಿ ಈ ಕೆಳಕಂಡ ಕ್ರಮಗಳನ್ನು ಅನುಸರಿಸಿ ಬಸ್ ಪಾಸ್ ವಿತರಿಸಲು ಕ್ರಮಕೈಗೊಳ್ಳುವುದು.

1. ವಿಕಲಚೇತನರ ರಿಯಾಯಿತಿ ಬಸ್‌ಪಾಸ್‌ಗಳನ್ನು ಫಲಾನುಭವಿಗಳು ನವೀಕರಿಸಿಕೊಳ್ಳಲು ಅನುಕೂಲವಾಗುವಂತೆ ಸಾಕಷ್ಟು ಕಾಲಾವಕಾಶ ನೀಡುವ ಉದ್ದೇಶದಿಂದ, 2020ನೇ ಸಾಲಿನಲ್ಲಿ ವಿತರಿಸಲಾಗಿರುವ ಮತ್ತು ದಿನಾಂಕ 31.12.2020 ರವರೆಗೆ ಮಾನ್ಯತೆ ಇರುವ, ವಿಕಲಚೇತನರ ಪಾಸ್‌ಗಳನ್ನು, ದಿನಾಂಕ 28.02.2021 ರವರೆಗೆ ಮಾನ್ಯ ಮಾಡುವುದು.
2. ದಿನಾಂಕ 26.12.2020 ರಿಂದ 2021 ನೇ ಸಾಲಿನ ವಿಕಲಚೇತನರ ಹೊಸ ಬಸ್‌ಪಾಸ್‌ಗಳನ್ನು ವಿತರಿಸಲು ಹಾಗೂ ಹಳೆಯ ಪಾಸ್‌ಗಳನ್ನು ನವೀಕರಿಸಲು ಅಗತ್ಯ ಕ್ರಮ ಕೈಗೊಳ್ಳುವುದು.
3. 2020ನೇ ಸಾಲಿನ ಪಾಸುಗಳ ನವೀಕರಣ ಮತ್ತು ನೂತನ ಪಾಸುಗಳಿಗೆ. ರೂ.660/- ಶುಲ್ಕ ನಿಗದಿಪಡಿಸಲಾಗಿದೆ. ಇದನ್ನು ನಗದಾಗಿ ಅಥವಾ ಡಿ.ಡಿ ರೂಪದಲ್ಲಿ ಪಾವತಿಸಿಕೊಳ್ಳುವುದು.
4. ಹಳೆಯ ಪಾಸುಗಳ ನವೀಕರಣಕ್ಕಾಗಿ ದಿನಾಂಕ: 28.02.2021 ರವರೆಗೆ ಅವಕಾಶ ಕಲ್ಪಿಸಲಾಗಿದೆ.
5. ಸದರಿ ದಿನಾಂಕದ ನಂತರ ನವೀಕರಣಕ್ಕೆ ಬರುವ ಫಲಾನುಭವಿಗಳಿಗೆ ನೂತನ ಪಾಸು ವಿತರಣೆ ಮಾದರಿಯಲ್ಲಿ ಅಗತ್ಯ ದಾಖಲಾತಿಗಳನ್ನು ಪಡೆದು ಪಾಸು ವಿತರಿಸುವುದು. ನೂತನ ಪಾಸು ವಿತರಣೆಗೆ ನಿರ್ದಿಷ್ಟ ಕಾಲಮಿತಿಯಿರುವುದಿಲ್ಲ.
6. ವಿಕಲಚೇತನರ ಬಸ್‌ಪಾಸ್ ನವೀಕರಣ ಹಾಗೂ ನೂತನ ಬಸ್‌ಪಾಸ್ ವಿತರಣೆಯ ಬಗ್ಗೆ ಸ್ಥಳೀಯ ಪತ್ರಿಕೆಗಳಲ್ಲಿ ಪ್ರಕಟಣೆ ಹೊರಡಿಸಿ ಅಗತ್ಯ ಪ್ರಚಾರ ನೀಡುವುದು.
7. 2021ನೇ ಸಾಲಿನ ವಿಕಲಚೇತನರ ಬಸ್ ಪಾಸ್ ವಿತರಣೆ / ನವೀಕರಣಕ್ಕೆ ಉಲ್ಲೇಖ-3 ರ ಸುತ್ತೋಲೆ / ನಿರ್ದೇಶನಗಳಂತೆ ಸೇವಾಸಿಂಧು ಪೋರ್ಟಲ್‌ನಲ್ಲಿ ದಾಖಲಿಸಲು ಕ್ರಮವಹಿಸುವುದು.
8. ಸೇವಾಸಿಂಧು ಪೋರ್ಟಲ್‌ನಲ್ಲಿ ಅರ್ಜಿಗಳನ್ನು ಸಲ್ಲಿಸುವ ಸಂಬಂಧ ವಿಭಾಗ ವ್ಯಾಪ್ತಿಯಲ್ಲಿ ಪತ್ರಿಕಾ ಪ್ರಕಟಣೆ ನೀಡುವುದು, ಬಸ್ ನಿಲ್ದಾಣದ ಮತ್ತು ಘಟಕದ ಅಯಕಟ್ಟಿನ ಸ್ಥಳದಲ್ಲಿ ಬ್ಯಾನರ್‌ಗಳನ್ನು ಪ್ರದರ್ಶಿಸುವ ವ್ಯವಸ್ಥೆ ಮಾಡುವುದು, PAS ಮುಖಾಂತರ ಪ್ರಚಾರ ಮಾಡಲು ಕ್ರಮಕೈಗೊಳ್ಳುವುದು.

### I. <u>ವಿಕಲಚೇತನರ ರಿಯಾಯಿತಿ ಬಸ್ ಪಾಸ್‌ಗಾಗಿ ಅರ್ಜಿ ಸಲ್ಲಿಸುವಿಕೆ:</u>

#### ಎ. ಆನ್‌ಲೈನ್ (ಸೇವಾಸಿಂಧು ಪೋರ್ಟಲ್ ಮುಖಾಂತರ):

1. ಪ್ರಸಕ್ತ ಸಾಲಿನಿಂದ ಹೊಸದಾಗಿ / ನವೀಕರಣದ ವಿಕಲಚೇತನರ ರಿಯಾಯಿತಿ ಬಸ್‌ಪಾಸ್‌ಗಾಗಿ ಆನ್‌ಲೈನ್‌ನಲ್ಲಿ ಸರ್ಕಾರ ನಿಗದಿಪಡಿಸಿರುವ ಸೇವಾಸಿಂಧು ಪೋರ್ಟಲ್ ನಲ್ಲಿ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.
2. ವಿಕಲಚೇತನ ಅರ್ಜಿದಾರರು ಆನ್‌ಲೈನ್‌ನಲ್ಲಿ ತಮ್ಮ ವಿವರಗಳನ್ನು ಭರ್ತಿಗೊಳಿಸಿ, ಅಗತ್ಯ ದಾಖಲೆಗಳನ್ನು JPG ಅಥವಾ PDF ನಮೂನೆಯಲ್ಲಿ ಆನ್‌ಲೈನ್‌ನಲ್ಲಿ ಅಡಕಗೊಳಿಸುವುದು.
3. ವಿಕಲಚೇತನರ ರಿಯಾಯಿತಿ ಬಸ್ ಪಾಸ್ ನವೀಕರಿಸಿಕೊಳ್ಳುವವರು ಕರಾರಸಾ ನಿಗಮದ ಬಸ್ ನಿಲ್ದಾಣದ ಪಾಸ್ ಕೌಂಟರ್‌ಗಳಲ್ಲಿ ಹಾಗೂ ಹೊಸದಾಗಿ ಪಾಸು ಪಡೆಯುವವರು ವಿಭಾಗೀಯ ಕಛೇರಿಯಲ್ಲಿ ಹಣ ಪಾವತಿಸಲು ಅವಕಾಶವಿರುತ್ತದೆ.
4. ಮುಂದುವರೆದು ಸೇವಾಸಿಂಧು Online payment ವ್ಯವಸ್ಥೆ ಸದ್ಯದಲ್ಲಿಯೇ ಜಾರಿಯಾಗಲಿದ್ದು, ವಿವರಗಳನ್ನು ನಂತರ ತಿಳಿಸಲಾಗುವುದು.

#### ಬಿ. ಮ್ಯಾನುಯಲ್ ಅರ್ಜಿ ಸ್ವೀಕಾರ :

1. ಮ್ಯಾನ್ಯುಯಲ್ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ. (ನವೀಕರಣ / ಹೊಸ ಪಾಸುಗಳನ್ನು ಪಡೆಯಲು)

II. ಪಾಸ್ ವಿತರಣಾ ಸಿಬ್ಬಂದಿಯವರ ಕರ್ತವ್ಯಗಳು :

1. ಪಾಸು ವಿತರಣಾ ಸಿಬ್ಬಂದಿಗಳು ಘಟಕ ವ್ಯವಸ್ಥಾಪಕರ / ವಿಭಾಗೀಯ ನಿಯಂತ್ರಣಾಧಿಕಾರಿಗಳ ಪರವಾಗಿ ದಾಖಲಾತಿಗಳನ್ನು ಆನ್‌ಲೈನ್‌ನಲ್ಲಿ ಪರಿಶೀಲಿಸಿ, ಅರ್ಜಿಗಳನ್ನು ಅನುಮೋದಿಸುವುದು. ಅರ್ಜಿಗೆ ಸಂಬಂಧ ಮಾಹಿತಿಯೂ ಎಸ್.ಎಂ.ಎಸ್ ಮೂಲಕ ಅರ್ಜಿದಾರರಿಗೆ ರವಾನೆಗೊಳ್ಳುವ ವ್ಯವಸ್ಥೆ ಇರುತ್ತದೆ.
2. ಅರ್ಜಿ ಸಂಖ್ಯೆ ಆಯ್ಕೆ ಮಾಡಿ view processing history ಮೇಲೆ ಕ್ಲಿಕ್ ಮಾಡಿದಾಗ, ಸಂಪೂರ್ಣ ಅರ್ಜಿಯ ವಿವರ ಮತ್ತು ಅಡಕಗಳನ್ನು ಪರಿಶೀಲಿಸಬಹುದು.
3. ವಿಕಲಚೇತನರ ರಿಯಾಯಿತಿ ಬಸ್ ಪಾಸಿನ ಅರ್ಜಿಯ ಬಗ್ಗೆ ಯಾವುದೇ ಸ್ಪಷ್ಟೀಕರಣದ ಅಗತ್ಯವಿದ್ದಲ್ಲಿ, "SEEK CLARIFICATION" ಆಯ್ಕೆ ಮಾಡುವ ಮೂಲಕ ಅರ್ಜಿಯನ್ನು ಆನ್‌ಲೈನ್ ಮುಖಾಂತರವೇ ಹಿಂದಿರುಗಿಸಬಹುದು, ಅರ್ಜಿಯನ್ನು ಒಪ್ಪಿಕೊಂಡ ಅಥವಾ ತಿರಸ್ಕರಿಸಿದ ಬಗ್ಗೆ ಕಾರಣ ತಿಳಿಸಿ Submit ಮೇಲೆ ಕ್ಲಿಕ್ ಮಾಡುವುದು.
4. ಪಾಸು ವಿತರಣೆಗೆ ಸಂಬಂಧಿಸಿದ ಭೌತಿಕ ದಾಖಲಾತಿಗಳನ್ನು ಕಡ್ಡಾಯವಾಗಿ ಪಡೆಯುವುದು.
5. Divisional Controller ಗೆ ಲಾಗಿನ್ ಮಾಡಿ, Message Box ಗೆ ಹೋಗಿ Inbox ನ್ನು ಆಯ್ಕೆ ಮಾಡುವುದು.
6. ಆನ್‌ಲೈನ್ ಅರ್ಜಿಗಳು ಎಲ್ಲಾ ರೀತಿಯಿಂದ ಸಮರ್ಪಕವಾಗಿದ್ದಲ್ಲಿ, Accept option ದಾಖಲಿಸುವುದು ಮತ್ತು ಹಿಂದಿನಂತೆ ಪಾಸು ವಿತರಿಸಲು ಈ ಹಿಂದೆ ಅನುಸರಿಸುತ್ತಿದ್ದ ಕ್ರಮಗಳನ್ನೇ ಅನುಸರಿಸುವುದು.
7. ಪ್ರತಿ ವಿಭಾಗದ ಪಾಸು ಶಾಖೆಯವರು ಪಾಸು ವಿತರಣೆಯ ಎಂ.ಐ.ಎಸ್ ವರದಿಗಳನ್ನು ಸಕಾಲದಲ್ಲಿ ಪಡೆದುಕೊಂಡು, ದೃಢೀಕರಿಸಿ ದಾಖಲೆಗಳನ್ನು ನಿರ್ವಹಿಸುವುದು.

IV. ಗಣಕ ಇಲಾಖೆಯವರ ಕರ್ತವ್ಯಗಳು :

1. ಸೇವಾಸಿಂಧು ಯೋಜನೆಯಡಿ ವಿತರಿಸುವ ವಿಕಲಚೇತನರ ರಿಯಾಯಿತಿ ಪಾಸುಗಳ ರಿಪೋರ್ಟ್‌ಗಳನ್ನು ಅಭಿವೃದ್ಧಿಪಡಿಸುವ ಸಂಬಂಧ ಸರ್ಕಾರದೊಂದಿಗೆ ಸಮನ್ವಯಿಸುವುದು.
2. ನೂತನ ವ್ಯವಸ್ಥೆಯನ್ನು ಸುಗಮವಾಗಿ ಜಾರಿಗೆ ತರುವ ಸಂಬಂಧ / ಎಂ.ಐ.ಎಸ್ ವರದಿಗಳ ಸಂಬಂಧ ಅಗತ್ಯ ಕ್ರಮವಹಿಸುವುದು.
3. ವಿಭಾಗಗಳ ಸೇವಾಸಿಂಧು ನೋಡೆಲ್ ಅಧಿಕಾರಿಗಳಿಗೆ ಸೇವಾಸಿಂಧು ಪೋರ್ಟಲ್ ಬಳಕೆ ಸಂಬಂಧ ಅಗತ್ಯ ಮಾಹಿತಿ / ತರಬೇತಿ ನೀಡುವುದು.

ಇನ್ನುಳಿದಂತೆ ಉಲ್ಲೇಖಿತ ಸಾಮಾನ್ಯ ಸ್ಥಾಯಿ ಆದೇಶದಲ್ಲಿನ ಅಂಶಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ಸುತ್ತೋಲೆ ಸ್ವೀಕರಿಸಿ ಜಾರಿಗೊಳಿಸಿದ ಬಗ್ಗೆ ಈ ಕಛೇರಿಗೆ ಅನುಸರಣಾ ವರದಿ ಸಲ್ಲಿಸಲು ತಿಳಿಸಲಾಗಿದೆ.

ಸಹಿ/-
ಮುಖ್ಯ ಸಂಚಾರ ವ್ಯವಸ್ಥಾಪಕರು (ವಾ)

ಪ್ರತಿಯನ್ನು ವಂದನಾಪೂರ್ವಕವಾಗಿ:

1) ನಿರ್ದೇಶಕರು, ವಿಕಲಚೇತನರು ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಕೇಂದ್ರ ಗೋಪುರ, ಬೆಂಗಳೂರು ಇವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.
2) ಸರ್ಕಾರದ ಅಧೀನ ಕಾರ್ಯದರ್ಶಿಗಳು, ಸಾರಿಗೆ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ, ಬಹುಮಹಡಿಗಳ ಕಟ್ಟಡ, ಬೆಂಗಳೂರು-560 001 ರವರ ಮಾಹಿತಿಗಾಗಿ ಕಳುಹಿಸಲಾಗಿದೆ.
3) ಎಲ್ಲಾ ವಿಭಾಗೀಯ ನಿಯಂತ್ರಣಾಧಿಕಾರಿಗಳು / ವಿಭಾಗೀಯ ಸಂಚಲನಾಧಿಕಾರಿಗಳು ಕ.ರಾ.ರ.ಸಾ.ನಿಗಮ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.
4) ಮುಖ್ಯ ಸಂಚಾರ ವ್ಯವಸ್ಥಾಪಕರು, ಬೆಂಮಸಾ ಸಂಸ್ಥೆ / ವಾಕರಸಾ ಸಂಸ್ಥೆ / ಈಕರಸಾ ಸಂಸ್ಥೆ, ಕೇಂದ್ರ ಕಛೇರಿ, ಬೆಂಗಳೂರು / ಹುಬ್ಬಳ್ಳಿ / ಕಲಬುರ್ಗಿ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.
5) ಮಾನ್ಯ ಅಧ್ಯಕ್ಷರು / ಮಾನ್ಯ ಉಪಾಧ್ಯಕ್ಷರು /ವ್ಯವಸ್ಥಾಪಕ ನಿರ್ದೇಶಕರ ಹಿರಿಯ / ಆಪ್ತ ಕಾರ್ಯದರ್ಶಿಗಳು, ಕ.ರಾ.ರ.ಸಾ.ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ ಕಳುಹಿಸಲಾಗಿದೆ.
6) ನಿರ್ದೇಶಕರು (ಸಿ&ಜಾ) / (ಭ&ಜಾ) ರವರ ಆಪ್ತ ಕಾರ್ಯದರ್ಶಿಗಳು, ಕ.ರಾ.ರ.ಸಾ.ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ ಕಳುಹಿಸಲಾಗಿದೆ.
7) ಎಲ್ಲಾ ಇಲಾಖಾ ಮುಖ್ಯಸ್ಥರು, ಕ.ರಾ.ರ.ಸಾ.ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ ಕಳುಹಿಸಲಾಗಿದೆ.
8) ಮುದ್ರಣ ಮತ್ತು ಲೇಖನಾ ಸಾಮಗ್ರಿ ನಿಯಂತ್ರಣಾಧಿಕಾರಿಗಳು, ಕ.ರಾ.ಸಾ ಮುದ್ರಣಾಲಯ, ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.

ಮುಖ್ಯ ಸಂಚಾರ ವ್ಯವಸ್ಥಾಪಕರು (ವಾ)